ಅನುಬಂದ

ನಗರದ ವಿವಿಧ ಸ್ಥಳಗಳಲ್ಲಿ ೬ ಮೇಲ್ಮಟ್ಟದ ಜಲಸಂಗ್ರಹಾರಗಳನ್ನು ಕಟ್ಟಲಾಗಿದೆ. ಒಂದು ಭೂಮಟ್ಟದ ಜಲಸಂಗ್ರಹಾರ, ನೌಕರರ ಕ್ವಾರ್ಟ್ರಸ್‌ಗಳನ್ನು, ವಿತರಣಾ ಜಾಲ ಭಾಗಶಃ ಪೂರ್ಣಗೊಳಿಸಲಾಗಿದೆ.

೩ ಮೇಲ್ಮಟ್ಟದ ಜಲಸಂಗ್ರಹಾಗಾರಗಳು ಪ್ರಗತಿಯಲ್ಲಿವೆ.

ಈ ಕೆಳಕಂಡ ಕೆಲಸಗಳಿಗೆ ಗುತ್ತಿಗೆದಾರರನ್ನು ಗೊತ್ತು ಮಾಡಲಾಗಿದ್ದು ಕೆಲಸಗಳು ಪ್ರಗತಿಯಲ್ಲಿವೆ.

೧) ಜಾಕ್‌ವೆಲ್ ಮತ್ತು ಪಂಪಿನ ಮನೆ, ಇನ್‌ಟೇಕವೆಲ್, ಸಂಪರ್ಕ ಕೊಳವೆ ಮಾರ್ಗ ಮೊದಲಾದ ಮೂಲಸ್ಥಾವರದ ಕೆಲಸಗಳು.

೨) ಆರ್. ಸಿ. ಉಕ್ಕು ಮತ್ತು ಪಿ. ಎಸ್. ಸಿ. ವಿರುಕೊಳವೆ ಮಾರ್ಗಗಳು ಮತ್ತು ಗ್ಯಾವಿಟ್ ಕೊಳವೆ ಮಾರ್ಗಗಳು.

೩) ಪಂಪಿಗ್ ಯಂತ್ರೋಪಕರಣಗಳನ್ನು ಸರಬರಾಜು ಮಾಡಿ ಆಳವಡಿಸುವುದು,

೪) ವಿವಿಧ ವ್ಯಾಸಗಳ ಪಿ. ಎಸ್. ಸಿ. ಫೀಡರ್ ಮೈನುಗಳನ್ನು ಹಾಕುವುದು.

ಈ ಯೋಜನೆಗೆ ಜನವರಿ ಅಂತ್ಯದವರೆಗೆ ೩೬೦.೯೪ ಲಕ್ಷ ರೂಗಳನ್ನು ವೆಚ್ಚ ಮಾಡಲಾಗಿದೆ.

ರಾಜ್ಯ ವಕ್ಫ್ ಮಂಡಳಿ ಕಛೇರಿ ಕಟ್ಟಡ ನಿರ್ಮಿಸುವುದು

೪೪೯ (೬೦೯) ಶ್ರೀ ಎ. ಎಂ. ಹಿಂಡುಸಗೆರಿ (ಹರಿಬ್ಬಳ್ಳಿ).—ಮಾನ್ಯ ವಕ್ಫ್, ಬಂದರುಗಳು ಮತ್ತು ಒಳನಾಡು ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಕಛೇರಿ ಕಟ್ಟಡದ ಅಂದಾಜು ವೆಚ್ಚವೆಷ್ಟು?

ಆ) ಈ ವಕ್ಫ್ ಮಂಡಳಿಯ ಕಟ್ಟಡದ ನಿರ್ಮಾಣಕ್ಕೆ ತಗುಲಿದ ಅಂತಿಮ ವೆಚ್ಚವೆಷ್ಟು?

ಇ) ಈ ಕಛೇರಿ ಕಟ್ಟಡವನ್ನು ಕಟ್ಟಲು ಯಾವ ಏಜೆನ್ಸಿಗೆ ವಹಿಸಲಾಯಿತ್ತು ?

ಈ) ಈ ಕಛೇರಿಯ ಕಟ್ಟಡದ ನಿರ್ಮಾಣಕ್ಕೆ ಟೆಂಡರುಗಳನ್ನು ಕರೆಯಲಾಗಿತ್ತೆ ?

ಶ್ರೀ ರೋಷನ್ ಬೇಗ್ (ವಕ್ಫ್, ಬಂದರುಗಳು ಮತ್ತು ಒಳನಾಡು ಸಾರಿಗೆ ಮಂತ್ರಿಗಳು).—

ಅ) ೯೪.೦೦ ಲಕ್ಷ ರೂಪಾಯಿಗಳು,

ಆ) ಅಂತಿಮ ಬಿಲ್ಲನ್ನು ನಿರೀಕ್ಷಿಸಲಾಗಿದೆ,

ಇ) ಕರ್ನಾಟಕ ಭೂಸೇನಾ ನಿಗಮ ನಿಯಮಿತೆ,

ಈ) ಇಲ್ಲ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಮತ್ತು ಇತರೆ ಯೋಜನೆಯಲ್ಲಿ ಖರ್ಚು ಮಾಡಿದ ಹೊಬಲಗು.

೫೦೦ (೭೮೧) ಶ್ರೀ ಮಲ್ಲಿಕಾರ್ಜುನ ಖರ್ಗೆ.—(ಗುರುಮಿಠಕಲ್). ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಾದ ವಿಶೇಷ ಘಟಕ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಮತ್ತು ಇತರೆ ಯೋಜನೆಯಲ್ಲಿ ಖರ್ಚು ಮಾಡಿದ ಹೊಬಲಗೆಷ್ಟು? (ಯೋಜನಾವಾರು, ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)